**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ.1571/2023**

| | | |
|---|---|---|
| ಸಾಕ್ಷಿದಾರರ ಹೆಸರು | : ನಾಗೇಶ್ | ಪ್ರಾಸಾ-1 |
| ತಂದೆಯ ಹೆಸರು | : ಅಣ್ಣಪ್ಪ | ಚಾಸಾ-22 |
| ವಯಸ್ಸು | : 30 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೂಲಿ | ದಿನಾಂಕಃ 04.09.2025 |
| ವಾಸಸ್ಥಳ | : ಬಿ.ಹೊಸಹಳ್ಳಿ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನನಗೆ ಮೃತ ರಾಜು, ಅರ್ಚನ ಮತ್ತು ಪಾರ್ವತಿ ಎಂಬುವವರ ಪರಿಚಯವಿರುತ್ತದೆ. ಚಾಸಾ-1 ಮತ್ತು ಚಾಸಾ-23 ರವರ ಪರಿಚಯ ನನಗಿದೆ.

ಸಾಕ್ಷಿಯು ದಿ.08.09.2022 ರಂದು ಬರೆಯಲಾದ ಮಹಜರ್ ಪ್ರತಿಯಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ಸದರಿ ಮಹಜರ್ ಪ್ರತಿಯನ್ನು ನಿಪಿ-4, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು 2 ಫೋಟೋಗಳಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸಿದ್ದು, ಸದರಿ ಫೋಟೋಗಳನ್ನು ನಿಪಿ-5 ಮತ್ತು 6 ಎಂದು ಗುರುತಿಸಲಾಯಿತು. ಸಾಕ್ಷಿಯು ದಿ.08.09.2022 ರ ಸ್ಥಳ ಮಹಜರ್ ನಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮಹಜರ್ ನ್ನು ನಿಪಿ-7 ಮತ್ತು ಸಾಕ್ಷಿಯು ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು 2 ಫೋಟೋಗಳಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸಿದ್ದು, ಅವುಗಳನ್ನು ನಿಪಿ-8 ಮತ್ತು 9 ಎಂದು ಗುರುತಿಸಲಾಯಿತು.

ಕಳೆದ 3 ವರ್ಷಗಳ ಹಿಂದೆ ನಾನು ಪೋಲಿಸ್ ಠಾಣೆಗೆ ನನ್ನ ವೈಯಕ್ತಿಕ ವಿಷಯವಾಗಿ ಭೇಟಿ ನೀಡಿದಾಗ ಚಾಸಾ-1 ರವರ ಪರಿಚಯವಿದ್ದ ಕಾರಣ ನಿಪಿ-4 ಮತ್ತು 7 ಕ್ಕೆ ಠಾಣೆಯಲ್ಲಿಯೇ ಸಹಿ ಪಡೆದುಕೊಂಡಿರುತ್ತಾರೆ. ನಿಪಿ-4 ಮತ್ತು 7 ರಲ್ಲಿ ಏನನ್ನು ಬರೆಯಲಾಗಿದೆ ಎಂದು ನನಗೆ ತಿಳಿದಿರುವುದಿಲ್ಲ. ಪೋಲಿಸರು ನನಗೆ ಓದಿ ತಿಳಿಸಿರುವುದಿಲ್ಲ. ಚಾಸಾ-1 ರವರು ಪರಿಚಯವಿದ್ದ ಕಾರಣ ನಾನು ಸದರಿ ನಿಶಾನೆಗಳಿಗೆ ಸಹಿಯನ್ನು ಮಾಡಿರುತ್ತೇನೆ. ನಿಪಿ-5, 6, 8 ಮತ್ತು 9 ನ್ನು ಠಾಣೆಯ ಬಳಿಯಲ್ಲಿಯೇ ಸಹಿ ಮಾಡಿರುತ್ತೇನೆ. ಠಾಣೆಯ ಬಳಿ ಟ್ರಾಕ್ಟರ್ ನ್ನು ನಿಲ್ಲಿಸಿದ್ದ ಕುರಿತು ಒಂದು ಸಹಿಯನ್ನು ಪಡೆದುಕೊಂಡಿರುತ್ತೇನೆ. ನಾನು ಸಹಿ ಮಾಡುವಾಗ 3.00 ರಿಂದ 4.00 ರ ಸಮಯವಾಗಿರುತ್ತದೆ. ಸದರಿ ನಿಶಾನೆಗೆ ನಾನು ಮತ್ತು ಚಾಸಾ-23 ರವರು ಸಹಿ ಮಾಡಿರುತ್ತೇವೆ. ಇದನ್ನು ಹೊರತುಪಡಿಸಿ ನನಗೆ ಇನ್ಯಾವುದೇ ಮಾಹಿತಿ ತಿಳಿದಿರುವುದಿಲ್ಲ. ಫೋಟೋಗಳನ್ನು ಠಾಣೆಯ ಬಳಿ ಇದ್ದ ರಸ್ತೆಯಲ್ಲಿ ನಿಲ್ಲಿಸಿ ತೆಗೆಯಲಾಗಿರುತ್ತದೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**<u>ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:</u>**

ದಿ.08.09.2022 ರಂದು ಮ.300 ರಿಂದ 4.00 ರ ಸಮಯದಲ್ಲಿ ಭಾರತಿಬೈಲಿಗೆ ಹೋಗುವ ರಸ್ತೆಯ ಜಾಗದಲ್ಲಿ ಸಹಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ದಿ.06.09.2022 ರಂದು ವಿದ್ಯುತ್ ಲೈನ್ ಗೆ ಟ್ರಾಕ್ಟರ್ ನ ಪ್ರಭಾವಳಿ ತಾಗಿ ಅಪಘಾತ ಸಂಭವಿಸಿದ ಕುರಿತು ಚಾಸಾ-1 ರವರು ದೂರು ನೀಡಿದ ಮೇರೆಗೆ ಪೋಲಿಸರು ಸ್ಥಳ ಮಹಜರ್ ಗೆ ಬಂದ ಸಂದರ್ಭದಲ್ಲಿ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನಿಪಿ-5 ಮತ್ತು 6 ರಂತೆ ಫೋಟೋಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಸ.4.30 ರಿಂದ 5.30 ರ ಸಮಯದಲ್ಲಿ ನನ್ನ ಸಮಕ್ಷಮ ಒಂದು ಟ್ರಾಕ್ಟರ್ ನ್ನು ಅಮಾನತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಟ್ರಾಕ್ಟರ್ ಮೇಲಿರುವ ಸಂಖ್ಯೆಯು ಅಳಿಸಿ ಹೋಗಿರುತ್ತದೆ ಸದರಿ ಟ್ರಾಕ್ಟರ್, ನೀಲಿ ಬಣ್ಣದ ಮಹೀಂದ್ರ ಕಂಪನಿಯ ಟ್ರಾಕ್ಟರ್ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನಿಪಿ-8 ಮತ್ತು 9 ರಂತೆ ಫೋಟೋವನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ದಿ.07.09.2022 ತನ್ನ ಸಂಪೂರ್ಣ ಹೇಳಿಕೆಯ ಭಾಗವನ್ನು ಅಲ್ಲಗಳೆದಿದ್ದು, ಸದರಿ ಹೇಳಿಕೆಯ ಭಾಗವನ್ನು ನಿಪಿ-10 ಎಂದು ಗುರುತಿಸಲಾಯಿತು. ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹಾ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಷಯದ ಕುರಿತು ನಾನು ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಪಿ.ಕೆ. ವಕೀಲರಿಂದಃ</u>**

ಸ್ಥಳ ಮಹಜರ್ ಮತ್ತು ಅಮಾನತು ಮಹಜರ್ ನ್ನು ಯಾವ ವಿಷಯದ ಕುರಿತು ಮಾಡಲಾಗಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ. ನಿಪಿ-5, 6, 8 ಮತ್ತು 9 ನ್ನು ಯಾವ ವಿಷಯದ ಕುರಿತು ತೆಗೆಯಲಾಗಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ.1571/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಸುರೇಶ | ಪ್ರಾಸಾ-2 |
| ತಂದೆಯ ಹೆಸರು | : ಮಂಜಯ್ಯ | ಚಾಸಾ-23 |
| ವಯಸ್ಸು | : 33 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೂಲಿ | ದಿನಾಂಕಃ 04.09.2025 |
| ವಾಸಸ್ಥಳ | : ಬಿ.ಹೊಸಹಳ್ಳಿ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನನಗೆ ಮೃತ ರಾಜು, ಅರ್ಚನ ಮತ್ತು ಪಾರ್ವತಿ ಎಂಬುವವರ ಪರಿಚಯವಿರುವುದಿಲ್ಲ. ಚಾಸಾ-1 ಮತ್ತು ಚಾಸಾ-22 ರವರ ಪರಿಚಯ ನನಗಿದೆ.

ಸಾಕ್ಷಿಯು ನಿಪಿ-4 ಮತ್ತು 7 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-4(ಬಿ) ಮತ್ತು ನಿಪಿ-7(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-5, 6, 8 ಮತ್ತು 9 ರಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸಿರುತ್ತಾರೆ.

ಕಳೆದ 2-3 ವರ್ಷಗಳ ಹಿಂದೆ ನಾನು ಬಣಕಲ್ ಪೋಲಿಸ್ ಠಾಣೆಯಲ್ಲಿ ನಿಪಿ-4 ಮತ್ತು 7 ಕ್ಕೆ ಸಹಿ ಮಾಡಿರುತ್ತೇನೆ. ನಿಪಿ-4 ಮತ್ತು 7 ರಲ್ಲಿ ಏನನ್ನು ಬರೆಯಲಾಗಿದೆ ಎಂದು ನನಗೆ ತಿಳಿದಿರುವುದಿಲ್ಲ. ಪೋಲಿಸರು ನನಗೆ ಓದಿ ತಿಳಿಸಿರುವುದಿಲ್ಲ. ನಿಪಿ-5, 6, 8 ಮತ್ತು 9 ನ್ನು ಠಾಣೆಯ ಬಳಿ ತೆಗೆಯಲಾಗಿರುತ್ತದೆ ಮತ್ತು ಸದರಿ ಫೋಟೋಗಳನ್ನು ಯಾವ ವಿಷಯದ ಕುರಿತು ತೆಗೆಯಲಾಗಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ. ನಿಪಿ-4 ಮತ್ತು 7 ಕ್ಕೆ ಮಧ್ಯಾಹ್ನದ ಸಮಯದಲ್ಲಿ ನಾನು ಮತ್ತು ಚಾಸಾ-22 ಸಹಿ ಮಾಡಿರುತ್ತೇವೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ದಿ.08.09.2022 ರಂದು ಮ.300 ರಿಂದ 4.00 ರ ಸಮಯದಲ್ಲಿ ಭಾರತಿಬೈಲಿಗೆ ಹೋಗುವ ರಸ್ತೆಯ ಜಾಗದಲ್ಲಿ ಸಹಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ದಿ.06.09.2022 ರಂದು ವಿದ್ಯುತ್ ಲೈನ್ ಗೆ ಟ್ರಾಕ್ಟರ್ ನ ಪ್ರಭಾವಳಿ ತಾಗಿ ಅಪಘಾತ ಸಂಭವಿಸಿದ ಕುರಿತು ಚಾಸಾ-1 ರವರು ದೂರು ನೀಡಿದ ಮೇರೆಗೆ ಪೋಲಿಸರು ಸ್ಥಳ ಮಹಜರ್ ಗೆ ಬಂದ ಸಂದರ್ಭದಲ್ಲಿ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನಿಪಿ-5 ಮತ್ತು 6 ರಂತೆ ಫೋಟೋಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಸ.4.30 ರಿಂದ 5.30 ರ ಸಮಯದಲ್ಲಿ ನನ್ನ

ಸಮಕ್ಷಮ ಒಂದು ಟ್ರ್ಯಾಕ್ಟರ್ ನ್ನು ಅಮಾನತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಟ್ರ್ಯಾಕ್ಟರ್ ಮೇಲಿರುವ ಸಂಖ್ಯೆಯು ಅಳಿಸಿ ಹೋಗಿರುತ್ತದೆ ಸದರಿ ಟ್ರ್ಯಾಕ್ಟರ್, ನೀಲಿ ಬಣ್ಣದ ಮಹೀಂದ್ರ ಕಂಪನಿಯ ಟ್ರ್ಯಾಕ್ಟರ್ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನಿಪಿ-8 ಮತ್ತು 9 ರಂತೆ ಫೋಟೋವನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹಾ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಷಯದ ಕುರಿತು ನಾನು ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.**
**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರಧನ್ಯಾದಂ., ಮೂಡಿಗೆರೆ.